ಸ್ಯ 1883ನೇ ಇಸವಿ ನವ್ಹಂಬರ್ ಮಾಹೇ ಬಾಬತು ಕಾಲಸ್ಥಿತೀ ರಿಪೋರ್ಟು.

ತುಮಕೂರು ಡಿಸ್ಟ್ರಿಕ್ಟು.

ಮಳೆ.—ಮಳೆಯು ತಿಂಗಳ ಆದಿಭಾಗದಲ್ಲಿ ಸ್ವಲ್ಪಹೆಚ್ಚು ಕಡಿಮೆ ಯಲ್ಲಾ ತಾಲ್ಲೂಕುಗಳಲ್ಲಿಯೂ ಸಾಧಾರಣವಾಗಿ ಬಿದ್ದಿರುತ್ತೆ, ಮತ್ತು ತಾಲ್ಲೂಕು ಹೆಡ್‌ಕ್ವಾರ್ಟರ್‌ಗಳಲ್ಲಿ ಈ ಕೆಳಗೆ ಕಂಡ ಮೇರೆ ಮಳೆ ಪರಿಮಾಣವು ಅಳೆಯಲ್ಪಟ್ಟತ್ತು.

ತಾಲ್ಲೂಕು.	ಇಂ.	ಸೆಂ.	ತಾಲ್ಲೂಕು.	ಇಂ.	ಸೆಂ.
ತುಮಕೂರು	2	4	ತಿಪಟೂರು	1	65
ಮದ್ದಗಿರಿ	0	50	ಪಾವಗಡ	0	40
ಚಿಕ್ಕನಾಯಕನಹಳ್ಳಿ	2	10	ಚಿತ್ರದುರ್ಗ	4	65
ಸೀರಾ	3	0	ಚಳ್ಳಕೆರೆ	1	30
ಗುಬ್ಬಿ	2	60	ಹೊಳಲ್‌ಕೆರೆ	2	30
			ಹಿರಿಯೂರು	2	87½

ಹವಾ—ಬೆಳಗಿನ ಹೊತ್ತು ಸಾಯಂಕಾಲದ ಹೊತ್ತು ಛಳಿಯಾಗಿತ್ತು.

ಫಸಲ್ಲುಗಳು—ಭತ್ತ, ಕಡಲೆ, ಜೋಳ, ಕೊತ್ತಂಬರಿ, ಮೆಂತ್ಯ, ಮತ್ತು ಕಬ್ಬು, ವಗೈರೇಗಳು, ಕೆಲವುಭಾಗಗಳಲ್ಲಿ ಬೇರಾವಾದವು; ರಾಗಿ, ಪುಣಜಿ ಭತ್ತ, ಸಾಮೆ, ನವಣೆ, ಬರಗು, ಹಾರಕ, ಮೆಣಸಿನಕಾಯಿ, ಪರಳು, ಅಡಿಕೆ, ತೆಂಗಿನಕಾಯಿ, ಕೊರಲೆ, ವೆಡ್ಡು ಮತ್ತು ಹೆಸರು, ಸಜ್ಜೆ, ಅಲಸಂದಿ ಮತ್ತು ಹುಚ್ಚೆಳ್ಳು, ಗೋಧಿ ಯಲ್ಲಾ ತಾಲ್ಲೂಕುಗಳಲ್ಲಿಯೂ ಕಟ್ಟುವಾದವು. ಸದರೀ ಮಾಣಿಯಲ್ಲಿ ಫಸಲುಗಳ ಸ್ಥಿತಿ ಚನ್ನಾಗಿತ್ತು.

ಜನಾರೋಗ್ಯ—ತುಮಕೂರು, ಮದ್ದಗಿರಿ ಮತ್ತು ಚಿತ್ರದುರ್ಗ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಜ್ವರವು ವ್ಯಾಪಿಸಿತ್ತು. ಚಳ್ಳಕೆರೆ ತಾಲ್ಲೂಕಿನ ಪರಸುರಾಮಪುರ ಸಮ್ಮತಿನಲ್ಲಿ ಸಿಡಬು ವ್ಯಾಪಿಸಿತ್ತು. ಇತರ ಸ್ಥಳಗಳಲ್ಲೂ ಆರೋಗ್ಯ ಚನ್ನಾಗಿತ್ತು. ಯೆಲ್ಲಾ ಕಾರಣಗಳಿಂದಲೂ ಅಕ್ಟೋಬರ್ ಮಾಹೆಯಲ್ಲಿ 713 ಮಂದಿಯೂ, ಸ್ಯ 1883ನೇ ಇಸವಿ ಸೆಪ್ಟಂಬರ್‌ನಲ್ಲಿ 706 ಮಂದಿಯೂ ಮೃತಪಟ್ಟರು.

ಜರ್ಮಾವರ್—ಮದ್ದಗಿರಿ, ಚಳ್ಳಕೆರೆ, ಚಿತ್ರದುರ್ಗ, ಹಿರಿಯೂರು, ಪಾವಗಡ ಮತ್ತು ಸೀರಾ ತಾಲ್ಲೂಕುಗಳಲ್ಲಿ ಕಾಲುಬಾಯಿಜ್ವರವೂ ಮತ್ತು ಚಪ್ಪೇರೋಗವು ಇನ್ನು ವ್ಯಾಪಿಸಿದೆ. ಜರ್ಮಾವರ್‌ಗಳಲ್ಲಿ ನೊಂದಾದ ಮರಣ ಸಂಖೆಗಳು ಈ ಕೆಳಗೆ ಕಂಡಮೇರಿಗೆ ತೋರಿಸಿದೆ:—

ಹಸುಗಳು	177	ಕತ್ತೆಗಳು	5
ಎತ್ತುಗಳು	173	ಕುದುರೆಗಳು	11
ಎಮ್ಮೇಕೋಣಗಳು	176		
ಕುರೀ ಮತ್ತು ಮೇಕೆಗಳು	1,972	ಜುಮ್ಲಾ	2,514.

ಜಮ್ರ್ಮಾಗಳು.—5,893 ರೂಪಾಯಿಗಳ ಕಂದಾಯವುಳ್ಳ ಜಮ್ರ್ಮಾಗಳು ಹೊಸದಾಗಿ ಸಾಗುವಳಿಗೆ ತಗದುಕೊಳ್ಳಲ್ಪಟ್ಟವು, ಮತ್ತು ರಾಜಿನಾಮೆ ಯಾವದು ಇಲ್ಲ.

ದಾರಣೆವಾಸಿ—ಮುಖ್ಯವಾದ ಆಹಾರ ಜಿನಿಸೀಗಳು ಇದರಡೀ ಕಂಡ ದಾರಣೇ ಪ್ರಕಾರ ಮಾರಲ್ಪಟ್ಟತು:—

	ಕೇರು.	ಚಟಾಕು.		ಕೇರು.	ಚಟಾಕು.	
ಅಕ್ಕಿ, ಅವ್ವಲ್ ತರಹಾ	12	0	ಲಾಗಾಯತು	15	0	ವರಿಗೆ
ಡಿಟೋ, ದುಯ್ಯಂ ತರಹಾ	14	0	,,	16	8	,,
ರಾಗಿ	40	0	,,	55	0	,,
ಅವರೆ	25	0	,,	42	0	,,
ಪುರಳೆ	38	0	,,	50	0	,,
ಗೋಧಿ, ಅವ್ವಲ್ ತರಹಾ	11	0	,,	16	0	,,
ಡಿಟೋ, ದುಯ್ಯಂ ತರಹಾ	10	0	,,	22	0	,,

ಮಹಮ್ಮದಲ್ಲಿ, ಕೆ. ಬಿ.,
ಆಫಿಷಿಯೇಟಿಂಗ್ ಡೆಪ್ಯುಟಿ ಕಮ್ಮಿಷನರ.